KRN—Bg. GPO—25

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಬೆಂಗಳೂರು, ಮಂಗಳವಾರ, ಫೆಬ್ರುವರಿ ೧೪, ೧೯೯೫ (ಮಾಘ ೨೫, ಶಕ ವರ್ಷ ೧೯೧೬) | ಸಂ : 219

ಭಾಗ ೧

## ಸಮಾಜ ಕಲ್ಯಾಣ ಸಚಿವಾಲಯ

ವಿಷಯ :— ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹಾಗೂ ಇತರೇ ಹಿಂದುಳಿದ ವರ್ಗಗಳ ಜನಾಂಗದವರಿಗೆ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿಗೆ ಭಾರತ ಸಂವಿಧಾನದ ಅನುಚ್ಛೇದ 16 (4) ರ ಮೇರೆಗೆ ಮೀಸಲಾತಿ ನಿಗದಿಪಡಿಸುವ ಕುರಿತು — ಆದೇಶ

ಓದಲಾಗಿದೆ :— ಸರ್ಕಾರದ ಆದೇಶ ಸಂಖ್ಯೆ ಸಕಇ 150 ಬಿಸಿಎ 94ರ ದಿನಾಂಕ : 17ನೇ ಸೆಪ್ಟೆಂಬರ್ 1994

ಪ್ರಸ್ತಾವನೆ :

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೇ ಹಿಂದುಳಿದ ವರ್ಗಗಳವರು ಅನುಸರಿಸಬೇಕಾದ ಮೀಸಲಾತಿ ನಿಯಮಾವಳಿಗಳನ್ನು ಕುರಿತಂತೆ ದಿನಾಂಕ : 20–4–1994 ಹಾಗೂ 25–7–1994ರಲ್ಲಿ ಸರ್ಕಾರದ ಆದೇಶವನ್ನು ಹಾಗೂ ದಿನಾಂಕ : 24–10–1994ರಿಂದ ಜಾರಿಗೆ ಬರುವಂತೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಲ್‌ಎಡಬ್ಲ್ಯೂ 60 ಎಲ್‌ಜಿಎನ್ 94ರ ದಿನಾಂಕ 24–10–1994ರ ಕುರಿತಂತೆ ಹಲವಾರು ಸಂಘ ಸಂಸ್ಥೆಗಳು ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು, ತಾತ್ಕಾಲಿಕ ಒಂದು ದಾವೆ ಸಂಖ್ಯೆ 438 / 94ರಲ್ಲಿ ರಾಷ್ಟ್ರ ಸರ್ವೋಚ್ಚ ನ್ಯಾಯಾಲಯವು ಮಧ್ಯಂತರ ತೀರ್ಪೊಂದನ್ನು ನೀಡುತ್ತಾ, ದಿನಾಂಕ : 9–9–1994ರಲ್ಲಿ ರಾಜ್ಯಗಳಲ್ಲಿನ ಮೀಸಲಾತಿಯು ಯಾವುದೇ ಸಂದರ್ಭದಲ್ಲಿಯೂ ಶೇಕಡಾ 50ರ ಪ್ರಮಾಣವನ್ನು ಮೀರಬಾರದೆಂದು ತಿಳಿಸಿದೆ. ಇದರ ಮೇರೆಗೆ ವೃತ್ತಿಪರ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಾವಕಾಶ ಕುರಿತಂತೆ ಮೀಸಲಾತಿ ಪ್ರಮಾಣವನ್ನು 50ಕ್ಕೆ ಮಿತಿಗೊಳಿಸಿ 1994–95ನೇ ಸಾಲಿಗೆ ಮಾತ್ರವೇ ಅನ್ವಯವಾಗುವಂತೆ ಆದೇಶ ಸಂಖ್ಯೆ ಸಕಇ 150 ಬಿಸಿಎ 94ರ ದಿನಾಂಕ 17–9–1994ರಲ್ಲಿ ಸರ್ಕಾರದ ಮೀಸಲಾತಿ ನೀತಿಯನ್ನು ಹೊರಡಿಸಲಾಗಿದೆ. ಸದರಿ ಆದೇಶದಲ್ಲಿ ಈ ಕೆಳಕಂಡಂತೆ ಮೀಸಲಾತಿ ಪ್ರಮಾಣವನ್ನು ನೀಡಲಾಗಿದೆ.

| | |
|---|---|
| ಪ್ರವರ್ಗ I | ಶೇ. 4 |
| ಪ್ರವರ್ಗ II(ಎ) | ಶೇ. 15 |
| ಪ್ರವರ್ಗ II(ಬಿ) | ಶೇ. 4 |
| ಪ್ರವರ್ಗ III(ಎ) | ಶೇ. 4 |
| ಪ್ರವರ್ಗ III (ಬಿ) | ಶೇ. 5 |
| ಪರಿಶಿಷ್ಟ ಜಾತಿ | ಶೇ. 15 |
| ಪರಿಶಿಷ್ಟ ಪಂಗಡ | ಶೇ. 3 |
| ಒಟ್ಟು | ಶೇ. 50 |

ಹಾಗೂ ಸದರಿ ಆದೇಶದಲ್ಲಿ ಹಿಂದುಳಿದವರಲ್ಲಿ ಮುಂದುವರಿದವರನ್ನು ಗುರುತಿಸುವಲ್ಲಿ (ಕ್ರೀಮೀ ಲೇಯರ್) ಅನುಸರಿಸಬೇಕಾದ ನಿಯಮಾವಳಿಗಳನ್ನು ಸಹಾ ತಿಳಿಸಲಾಗಿದೆ. ಪ್ರಸ್ತುತ ಭಾರತ ಸಂವಿಧಾನದ ಅನುಚ್ಛೇದ 16 (4)ರ ಮೇರೆಗೆ ನೇಮಕಾತಿ ಮೀಸಲಾತಿಗೂ ಸಹ ದಿನಾಂಕ : 17–9–1994ರ ಆದೇಶದಲ್ಲಿನ ವರ್ಗೀಕರಣ ಹಾಗೂ ಮೀಸಲಾತಿ ಪ್ರಮಾಣಗಳನ್ನು ಅನುಸರಿಸಲು ಸರ್ಕಾರವು ತೀರ್ಮಾನಿಸಿದ್ದು, ಈ ಆದೇಶಗಳನ್ನು ಹೊರಡಿಸಲಾಗುತ್ತಿದೆ. ಹಾಗೂ ಈ ನಿಯಮಗಳನ್ನು ದಿನಾಂಕ : 31–5–1995ರವರೆಗೆ ಜಾರಿಯಲ್ಲಿರುವಂತೆ ನಿರ್ಧರಿಸಿ ಹೊರಡಿಸಲಾಗುತ್ತಿದೆ.

Principal
Sri Adichunchanagiri First Grade Collage
Channarayapatna-573 116

Scanned with CamScanner

ಸರ್ಕಾರದ ಆದೇಶ ಸಂಖ್ಯೆ ಸಕಇ 251 ಬಿಸಿಎ 94, ಬೆಂಗಳೂರು ದಿನಾಂಕ 31ನೇ ಜನವರಿ 1995

ಭಾರತ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 438 / 94ರಲ್ಲಿ ದಿನಾಂಕ 9-9-1994ರಂದು ನೀಡಿರುವ ಮಧ್ಯಂತರ ಆದೇಶಕ್ಕನುಸಾರವಾಗಿ ರಾಜ್ಯ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ದಿನಾಂಕ 31-5-1995ರ ವರೆಗೆ ಮಾತ್ರ ಅನ್ವಯಿಸುವಂತೆ, ಭಾರತ ಸಂವಿಧಾನದ ಅನುಚ್ಛೇದ 16(4)ರ ಮೇರೆಗೆ ರಾಜ್ಯದ ಅಧೀನದಲ್ಲಿರುವ ಸೇವೆಗಳಿಗೆ ನೇಮಕಾತಿ ಮೀಸಲಾತಿಯನ್ನು ಒಟ್ಟು ಮೀಸಲಾತಿ ಪ್ರಮಾಣವು ಶೇ. 50 ನ್ನು ಮೀರದಂತೆ, ರಿಟ್ ಅರ್ಜಿ ಸಂಖ್ಯೆ 694 / 94ರಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯವು ನೀಡುವ ತೀರ್ಮಾನಕ್ಕೊಳಪಟ್ಟು ಈ ಕೆಳಕಂಡಂತೆ ನಿಗದಿಪಡಿಸಲು ಆದೇಶಿಸಿದೆ:-

| | |
|---|---|
| ಪ್ರವರ್ಗ I | ಶೇ. 4 |
| ಪ್ರವರ್ಗ II(ಎ) | ಶೇ. 15 |
| ಪ್ರವರ್ಗ II(ಬಿ) | ಶೇ. 4 |
| ಪ್ರವರ್ಗ III(ಎ) | ಶೇ. 4 |
| ಪ್ರವರ್ಗ III(ಬಿ) | ಶೇ. 5 |
| ಪರಿಶಿಷ್ಟ ಜಾತಿ | ಶೇ. 15 |
| ಪರಿಶಿಷ್ಟ ಪಂಗಡ | ಶೇ. 3 |
| ಒಟ್ಟು | ಶೇ. 50 |

ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಪ್ರವರ್ಗ 1ರ ಅಭ್ಯರ್ಥಿಗಳನ್ನು ಹೊರತುಪಡಿಸಿ, ರಾಜ್ಯಾಧೀನ ಸೇವೆಗಳಲ್ಲಿನ / ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಗಳಲ್ಲಿನ ಹಾಗೂ ರಾಜ್ಯ ಸರ್ಕಾರ ಸಾರ್ವಜನಿಕ ಉದ್ಯಮಗಳಲ್ಲಿನ ಮತ್ತು ರಾಜ್ಯ ಸರ್ಕಾರದ ಅನುದಾನಿತ/ರಾಜ್ಯ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿನ ನೇಮಕಾತಿ ಮೀಸಲಾತಿಯ ಪ್ರಯೋಜನ ಪಡೆಯಲು ಅಭ್ಯರ್ಥಿ/ತಂದೆ-ತಾಯಿ/ಪೋಷಕರು ಈ ಕೆಳಕಂಡ ಉದ್ಯೋಗ ಮತ್ತು/ಅಥವಾ ಸ್ಥಿರಾಸ್ತಿಯನ್ನು ಹೊಂದಿದ್ದಲ್ಲಿ ಅರ್ಹರಾಗಿರುವುದಿಲ್ಲ ; ಅಂದರೆ

(1) ಅಭ್ಯರ್ಥಿ/ತಂದೆ-ತಾಯಿ / ಪೋಷಕರು, ಸರ್ಕಾರದ ಒಂದನೇ ದರ್ಜೆಯ ಅಥವಾ ಎರಡನೇ ದರ್ಜೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ, ಅಥವಾ ಖಾಸಗಿ ಕೈಗಾರಿಕೆ / ಸಂಸ್ಥೆಗಳ ಉದ್ಯೋಗಿಯಾಗಿದ್ದು, ಎರಡನೇ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಿಮೆಯಿಲ್ಲದ ವೇತನ ಶ್ರೇಣಿಯ ವೇತನ ಪಡೆಯುತ್ತಿದ್ದರೆ :- (ವೇತನ ಶ್ರೇಣಿ ರೂ. 2050-3950)

(2) ಅಭ್ಯರ್ಥಿ/ತಂದೆ-ತಾಯಿ/ಪೋಷಕರು ಆದಾಯ ತೆರಿಗೆ ಪಾವತಿದಾರರಾಗಿದ್ದರೆ

(3) ಅಭ್ಯರ್ಥಿ/ತಂದೆ-ತಾಯಿ/ಪೋಷಕರು ಮಾರಾಟ ತೆರಿಗೆ ಪಾವತಿದಾರರಾಗಿದ್ದರೆ

(4) ಅಭ್ಯರ್ಥಿ/ತಂದೆ-ತಾಯಿ/ಪೋಷಕರು ಇವರಲ್ಲಿ ಯಾರೊಬ್ಬರು ಅಥವಾ ಇಬ್ಬರೂ ಸೇರಿ 8 ಹೆಕ್ಟೇರ್ ಮಳೆಯಾಧಾರಿತ ಅಥವಾ ಒಣಭೂಮಿ ಅಥವಾ ತತ್ಸಮಾನವಾದ ಇತರೇ ಜಮೀನನ್ನು ಹೊಂದಿದ್ದರೆ

ಮತ್ತು ಮೇಲ್ಕಂಡ ಪ್ರವರ್ಗ I, II (ಎ), II (ಬಿ), III (ಎ), III (ಬಿ) ಗಳಲ್ಲಿ ವರ್ಗೀಕರಿಸಲಾದ ಜಾತಿಗಳ ಪಟ್ಟಿಯು ಆದೇಶ ಸಂಖ್ಯೆ ಸಕಇ 150 ಬಿಸಿಎ 94 ದಿನಾಂಕ 17-9-1994ರ ಅನುಬಂಧಗಳಲ್ಲಿನ ಜಾತಿಗಳಿಗೆ ಭಾರತ ಸಂವಿಧಾನದ ಅನುಚ್ಛೇದ 16(4) ರನ್ವಯ ನೇಮಕಾತಿ ಮೀಸಲಾತಿಗೆ ಅನ್ವಯಿಸುವುದು.

ಸ/-

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಹೆಚ್. ದೇವರಾಜ್,
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ತಿದ್ದುಪಡಿ

ಸಂಖ್ಯೆ ಸಕಇ 251 ಬಿಸಿಎ 94, ಬೆಂಗಳೂರು, ದಿನಾಂಕ 9ನೇ ಫೆಬ್ರವರಿ 1995

ದಿನಾಂಕ 31-5-1995 ರವರೆಗೆ ಕರ್ನಾಟಕ ರಾಜ್ಯದಲ್ಲಿ ನೇಮಕಾತಿ ಮೀಸಲಾತಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ನಿಯಮಾವಳಿಗಳ ಕುರಿತಂತೆ ಸರ್ಕಾರದ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಸಕಇ 251 ಬಿಸಿಎ 94 ರ ದಿನಾಂಕ 31-1-1995ರಲ್ಲಿ ಹೊರಡಿಸಲಾಗಿದ್ದು ಇದರ ಆದೇಶ ಭಾಗದ ಹಿಂದುಳಿದವರಲ್ಲಿ ಮುಂದುವರಿದವರನ್ನು ಗುರುತಿಸುವಲ್ಲಿ ಇರುವ 4 ನೇ ಷರತ್ತಿನ ನಂತರ 5ನೇಯದಾಗಿ " ಅಭ್ಯರ್ಥಿ/ತಂದೆ/ತಾಯಿ/ಪೋಷಕರು ಸಂಪತ್ತು ತೆರಿಗೆ ಪಾವತಿದಾರರಾಗಿದ್ದಲ್ಲಿ" ಎಂದು ಸೇರಿಸಿ ಓದಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಹೆಚ್. ದೇವರಾಜ್,
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

Principal
Sri Adichunchanagiri First Grade Collage
Channarayapatna-573 116

ವಿಷಯ :- ದಿನಾಂಕ 31-5-95ರವರೆಗೆ ನೇಮಕಾತಿ ಸೌಲಭ್ಯಗಳನ್ನು ಪಡೆಯುವಲ್ಲಿ ಅನುಸರಿಸಬೇಕಾದ ಮಾರ್ಗದರ್ಶಿ ನಿಯಮಾವಳಿಗಳು – ಈ ಸೌಲಭ್ಯವನ್ನು ಪಡೆಯುವಲ್ಲಿ ಸಲ್ಲಿಸಬೇಕಾಗಿರುವ ಘೋಷಣಾ ಪತ್ರ/ಪರಿಶೀಲನಾ ಪ್ರಮಾಣಪತ್ರಗಳ-ನಿಗದಿತ ನಮೂನೆ ಕುರಿತು- ಆದೇಶ

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ ಸಕಇ 251 ಬಿಸಿಎ 94ರ ದಿನಾಂಕ : 31-1-95

ಪ್ರಸ್ತಾವನೆ :

ಭಾರತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ ದಿನಾಂಕ 31-5-95ರವರೆಗೆ ನೇಮಕಾತಿ ಸೌಲಭ್ಯಗಳನ್ನು ಪಡೆಯುವಲ್ಲಿ ಅನುಸರಿಸಬೇಕಾದ ಮಾರ್ಗದರ್ಶಿ ನಿಯಮಾವಳಿಗಳ ಕುರಿತಂತೆ, ಸರ್ಕಾರದ ಆದೇಶಗಳನ್ನು ಮೇಲೆ ಓದಲಾಗಿರುವ ಸರ್ಕಾರದ ಆದೇಶದಲ್ಲಿ ಹೊರಡಿಸಲಾಗಿದ್ದು, ಇದಕ್ಕಾಗಿ ಅಭ್ಯರ್ಥಿಗಳು ಸಲ್ಲಿಸಬೇಕಾದ ಘೋಷಣಾ ಪತ್ರ ಹಾಗೂ ಪರಿಶೀಲನಾ ಪ್ರಮಾಣ ಪತ್ರಗಳ ನಮೂನೆಯನ್ನು ಹೊರಡಿಸಲು ನಿರ್ಧರಿಸಿ, ಸರ್ಕಾರ ಈ ಆದೇಶಗಳನ್ನು ಹೊರಡಿಸುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ ಸಕಇ 40 ಬಿಸಿಎ 95, ಬೆಂಗಳೂರು ದಿನಾಂಕ 8ನೇ ಫೆಬ್ರವರಿ 1995

ಸರ್ಕಾರದ ಮೇಲೆ ಓದಲಾದ ಆದೇಶದ ಸಂಖ್ಯೆ ಸಕಇ 251 ಬಿಸಿಎ 94ರ ದಿನಾಂಕ : 31-1-1995ರ ಮೇರೆಗೆ ದಿನಾಂಕ 31-5-95ರವರೆಗೆ ನೇಮಕಾತಿ ಸೌಲಭ್ಯಗಳನ್ನು ಪಡೆಯುವಲ್ಲಿ ಅಭ್ಯರ್ಥಿಗಳು ಸಲ್ಲಿಸಬೇಕಾದ ಘೋಷಣಾ ಹಾಗೂ ಪರಿಶೀಲನಾ ಪ್ರಮಾಣ ಪತ್ರಗಳನ್ನು ಅನುಬಂಧದಲ್ಲಿರುವ ನಮೂನೆಯಲ್ಲಿ ಸಲ್ಲಿಸುವಂತೆ ಆದೇಶವನ್ನು ಹೊರಡಿಸುವಲ್ಲಿ ಸರ್ಕಾರವು ಹರ್ಷಿಸುತ್ತದೆ.

ದಿನಾಂಕ 31-5-1995ರವರೆಗೆ ನೇಮಕಾತಿ ಸೌಲಭ್ಯಗಳನ್ನು ಪಡೆಯುವಲ್ಲಿ ಅಭ್ಯರ್ಥಿಗಳು ಜಾತಿ ಘೋಷಣಾ ಹಾಗೂ ಪರಿಶೀಲನಾ ಪ್ರಮಾಣ ಪತ್ರಗಳನ್ನು ನೀಡುವಲ್ಲಿ ಸಂಬಂಧಿತ ಅಧಿಕಾರಿಗಳು ಸದರಿ ಅಭ್ಯರ್ಥಿಗಳ ಜಾತಿ ಮತ್ತು ಉಪ ಜಾತಿಗಳ ವರ್ಗೀಕರಣವನ್ನು ಸರ್ಕಾರದ ಆದೇಶ ಸಂಖ್ಯೆ ಸಕಇ 251 ಬಿಸಿಎ 94ರ ದಿನಾಂಕ 31-1-95ರಲ್ಲಿ ಬರುವಂತೆ ಅನುಸರಿಸುವುದು ಪರಿಶೀಲನಾ ಪ್ರಮಾಣ ಪತ್ರವನ್ನು ನೀಡಲು ತಹಸೀಲ್ದಾರ್ ಹಾಗೂ ಮೇಲ್ಪಟ್ಟ ಕಂದಾಯ ಅಧಿಕಾರಿಗಳಿಗೆ ಮಾತ್ರ ಅಧಿಕಾರ ನೀಡಲಾಗಿದೆ.

ಸದರಿ ಸೌಲಭ್ಯವನ್ನು ಪಡೆಯುವಲ್ಲಿ ವರ್ಗ 1ನ್ನು ಹೊರತುಪಡಿಸಿದಂತೆ ಯಾವ ಅಭ್ಯರ್ಥಿ/ಅಭ್ಯರ್ಥಿಯ ತಂದೆ/ತಾಯಿ/ಪೋಷಕರು, ಗಂಡ ಅಥವಾ ಹೆಂಡತಿ ಈ ಕೆಳಕಂಡ ಉದ್ಯೋಗ ಅಥವಾ ಸ್ಥಿರಾಸ್ತಿಯನ್ನು ಹೊಂದಿದ್ದಲ್ಲಿ ಅರ್ಹರಾಗಿರುವುದಿಲ್ಲ.

ಅ) 2ನೇ ದರ್ಜೆ ಪತ್ರಾಂಕಿತ ಸರ್ಕಾರಿ ಅಧಿಕಾರಿಗಳಾಗಿದ್ದಲ್ಲಿ (ವೇತನ ಶ್ರೇಣಿ 2050-3950) ಅಥವಾ ತತ್ಸಮಾನ ವೇತನ ಶ್ರೇಣಿಯ ಸರ್ಕಾರಿ ಸ್ವಾಮ್ಯದ ಅಥವಾ ಕೈಗಾರಿಕೆ/ಸಂಸ್ಥೆಗಳ ಹುದ್ದೆಗಳಲ್ಲಿದ್ದಲ್ಲಿ

ಆ) ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ

ಇ) ಮಾರಾಟ ತೆರಿಗೆ ಪಾವತಿದಾರರಾಗಿದ್ದಲ್ಲಿ

ಈ) ಸಂಪತ್ತು ತೆರಿಗೆ ಪಾವತಿದಾರರಾಗಿದ್ದಲ್ಲಿ

ಉ) 8 ಹೆಕ್ಟೇರ್ ಮಳೆಯಾಶ್ರಿತ ಅಥವಾ [illegible] ಅಥವಾ ಅದರ ಸಮಾನಾಂತರ ತೋಟ/ಬಾಗಾಯ್ತು (ಭೂ ಸುಧಾರಣಾ ಕಾಯ್ದೆ ಮೇರೆಗೆ) ಜಮೀನನ್ನು ಹೊಂದಿದ್ದಲ್ಲಿ.

ಕರ್ನಾಟಕದ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಹೆಚ್. ದೇವರಾಜ್,
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

Sri Adichunchanagiri First Grade College, Channarayapatna 573 116
No. ........
Dt. ........

Principal
Sri Adichunchanagiri First Grade Collage
Channarayapatna-573 116

## SOCIAL WELFARE SECRETARIAT

**Sub:** Reservations for admission to the Educational Institutions as per Article 15(4) and Employment as per Article 16(4) of the Constitution of India and New Creamy Layer Policy Orders....reg.

**Read:**
1. G.O. No. SWD 150 BCA 94 Dated: 17-09-94
2. G.O. No. SWD 251 BCA 94 Dated: 31-01-95
3. G.O. No. SWD 304 BCA 94 Dated: 14-02-96
4. Letter No. KSCBC:MS/Reports/2000-01 Dated: 14-12-2000 of the Member Secretary Karnataka State Commission for Backward Classes.

**Preamble:**

In Govt. Order Dated: 17-09-94 read (1) above, Govt. have formulated reservation policy for Schedule Caste and Scheduled Tribes and other Backward Classes for admissions to professional courses for the year 1994-95 as per the lists of castes enclosed thereto as follows:

| | |
|---|---|
| CATEGORY-I | 4% |
| CATEGORY-II (A) | 15% |
| CATEGORY-II (B) | 4% |
| CATEGORY-III (A) | 4% |
| CATEGORY-III (B) | 5% |
| SCHEDULED CASTES | 15% |
| SCHEDULED TRIBES | 3% |

2. Under the said order Dated: 17-09-94 it has also been stated that no person other than belonging to Scheduled Castes, Scheduled Tribes and Category-I of Backward Classes shall be entitled to the benefit of reservation for admission to professional courses unless he/she satisfies the conditions of the creamy layer specified there under.

3. In G.O. Dated: 31-01-1995 read at Sl. No. 2 above, the aforesaid reservation and creamy layer policy envisaged in the order Dated: 17-09-94 read at Sl. No. (1), has been made applicable to the employment too, under Article 16(4) of the Constitution of India.

4. In G.O. Dated: 14-02-96 read at Sl. No. (3) above the Creamy Layer Policy existed as on 01-01-95 for the purpose of admission to the professional courses was also made applicable to employment with retrospective effect from 01-01-94.

5. In Writ Petition No. 438/94 the Hon'ble Supreme Court of India have passed an interim order stating that the reservation in any case should not exceed 50%. Similar writs bearing No. 417/94, and 694/94 are pending disposal before the Hon'ble Supreme Court. Therefore, in G.O. No. SWD 61 BCA 95 Dated: 28-12-95 the currency of the 50% reservation specified in G.O. Dated: 17-09-94 and 13-01-95 has been extended till the final decision in WP No. 438/94, 471/94 and 694/94 is taken by Hon'ble Supreme Court.

6. Now the Karnataka State Commission for Backward Classes have submitted special report and 71 advices vide their letter Dated: 04-12-2000 read at Sl. No. 4 above. Pending consideration of the entire report, the Government have examined in detail the Creamy Layer Policy contained in the Special Report and 71 Advices, relating to inclusions, deletions, correction of spellings etc. and have made the following orders.

I.5-0 G+10,500+ 6000 SC



**Government Order No. SWD 225 BCA 2000, Dated: 30th March 2002**

After careful consideration of the above proposal the Government are pleased to make the following orders;

1. The quantum of Reservation Specified in G.O. Dated: 17-09-1994 and 31-01-1995 read at Sl. No. (1) & (2) respectively is continued for admission to Educational Institutions and Employment.

2. The revised list of Backward Classes enclosed to this order as at Annexure-I, incorporating recommendations of the BC Commission, is brought into force with immediate effect.

3. A new comprehensive Creamy Layer Policy as detailed in Annexure-II to this Government order is brought into force with immediate effect. This Creamy Layer Policy does not apply to SCs/STs and Category-I of the Backward Classes. Candidates belonging to Category-II(A), II(B), III(A), and III(B) shall be entitled to reservation in the manner specified in the new comprehensive Creamy Layer Policy.

By Order and in the name of Governor of Karnataka,

PR. 308

**D.M. AGA**
Deputy Secretary to the Government,
Social welfare Department.

**Government Order No. SWD 225 BCA 2000, Dated: 30th March 2002**

**ANNEXURE-I**

**CATEGORY-I**

| Sl. No. | Name of the Caste | | Sl. No. | | Name of the Caste |
|---|---|---|---|---|---|
| 1. | | Agamudi | | (h) | Gosayi |
| 2. | (a) | Ambalakaran | | (i) | Gusai |
| | (b) | Ambalakarma | | (j) | Helava |
| | (c) | Mutrasi | | (k) | Helova |
| | (d) | Mutracha | | (l) | Holeva |
| 3. | | Bagganu | | (m) | Nandiwala |
| 4. | | Bavandhi | | (n) | Pichiguntla |
| 5. | (a) | Bavaji | | (o) | Pichiguntala |
| | (b) | Atit | | (p) | Pichigunlala |
| | (c) | Bairagi | | (q) | Bava |
| | (d) | Bavani | | (r) | Byaragi |
| | (e) | Byragi | 6. | (a) | Bestha |
| | (f) | Daurigosayi | | (b) | Ambiga/Ambi |
| | (g) | Davari | | (c) | Barki/Barika |

Principal 27/9/2021
Sri Adichunchanagiri First Grade Collage
Channarayapatna-573 115

I.5+